ಅ) ೧) ಅಭಿವೃದ್ಧಿ ಕಾರ್ಯಗಳಿಗೆ ರೂ. ೧೪೪೯ ಲಕ್ಷಗಳು

೨) ಅಧ್ಯಕ್ಷ	ಉಪಾಧ್ಯಕ್ಷ	ಅಧಿಕಾರಿಗಳು
ಅ) ಪಗಾರ ರೂ. ೦.೨೨ ಲಕ್ಷ	ರೂ. ೦.೨೦ ಲಕ್ಷ	ರೂ. ೧೮.೨೬ ಲಕ್ಷ
ಆ) ಪ್ರವಾಸ ರೂ. ಭತ್ಯೆ ೦.೦೭ ಲಕ್ಷ	ರೂ. ೦.೦೯ ಲಕ್ಷ	ರೂ. ೦.೦೦ ಲಕ್ಷ

ಗೋಕಾಕ್ ತಾಲ್ಲೂಕಿನ ಯೋಗಿ-ಕೊಳ್ಳ ಪ್ರವಾಸಿ ಸ್ಥಳವನ್ನಾಗಿ ಮಾಡುವುದು,

೬೫೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿನ ಯೋಗಿ ಕೊಳ್ಳವನ್ನು ಪ್ರವಾಸಿ ಕೇಂದ್ರವಾಗಿ ಮಾಡಲಾಗುವುದೆ ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ತೊಂದರೆಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು),—

ಅ) ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಹಂಪೆಯ ಪುರಂದರ ಉತ್ಸವ ಹಾಗೂ ವಿಜಯನಗರ ಉತ್ಸವಗಳು

೬೬೮. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಂಪೆಯಲ್ಲಿ ಈ ಬಾರಿ ನಡೆದ ಪುರಂದರ ಉತ್ಸವ ಹಾಗೂ ವಿಜಯನಗರ ಉತ್ಸವಕ್ಕೆ ತಗುಲಿದ ವೆಚ್ಚ ಎಷ್ಟು ? (ಪ್ರತ್ಯೇಕ ವಿವರ ನೀಡುವುದು)

ಆ) ಹೊರ ರಾಜ್ಯಗಳಿಂದ ಈ ಉತ್ಸವಕ್ಕೆ ಧನ ಸಹಾಯ ದೊರೆತಿದೆಯೇ, ಹಾಗಿದ್ದಲ್ಲಿ ಅದರ ಮೊತ್ತವೆಷ್ಟು ?

ಇ) ಉತ್ಸವಗಳನ್ನು ವೀಕ್ಷಿಸಿದ ಒಟ್ಟು ಜನಸಂಖ್ಯೆ ಎಷ್ಟು ?

ಈ) ಮುಂದಿನ ವರ್ಷಗಳಲ್ಲಿ ಈ ಎರಡು ಉತ್ಸವಗಳನ್ನು ನಡೆಸಲು ಸರ್ಕಾರವು ತೀರ್ಮಾನಿಸಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು).—

ಅ) ರೂ. ೧೫,೨೭,೦೦೦-೦೦ ವಿವರ ಪಟ್ಟಿ ಲಗತ್ತಿಸಿದೆ,

ಆ) ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಇವರಿಂದ ರೂ. ೧೦.೦೦ ಲಕ್ಷಗಳು ದೊರೆತಿದೆ.

ಇ) ಸುಮಾರು ೨ ಲಕ್ಷ.

ಈ) ಹೌದು,